> ಆತ್ಮ ತನ್ನ ಸಂಗಾತಿಯನ್ನು ತಾನೇ ಆಯ್ಕೆ ಮಾಡಿಕೊಂಡು ಬಾಗಿಲು ಹಾಕಿಕೊಂಡು ಬಿಡುತ್ತದೆ... ಆಮೇಲೆ ಯಾರೇ ಬರಲಿ ಕದ ತೆರೆಯುವುದಿಲ್ಲ... ಚಕ್ರವರ್ತಿಯೇ ಬಂದು ಮಂಡಿಯೂರಿ ಬೇಡಿಕೊಂಡರೂ ಸರಿ. ಬದಲಾಗುವುದಿಲ್ಲ...

ಒರಟು ಶೈಲಿಯಾದರೆ, ಇವನದು ಹೊಸ ನವ್ಯೋತ್ತರ ಶೈಲಿ! ಒಬ್ಬನು ಪೂರ್ವದೇಶದವನಾದರೆ ಮತ್ತೊಬ್ಬ ಪಶ್ಚಿಮದವನು.

ಮುರಕಾಮಿಯು ಮೇಘನಾದನ್‌ಗೆ ಹತ್ತಿರವಾಗಲು ಕಾರಣ ಇಷ್ಟೇ – ಅವನ ಕಥೆಗಳ ಪಾತ್ರಗಳು ತನ್ನ ಹಾಗೆ, ಒಂದಲ್ಲ ಒಂದು ಕಾರಣದಿಂದ ಹೆಣ್ಣಿನಿಂದ ದೂರವಾಗಿ ಸ್ತ್ರೀಯರಿಲ್ಲದ ಪುರುಷರಾಗಿ ಬದುಕುತ್ತಾರೆ; ಇವನ ಹಾಗೆಯೇ, ಸುಖವನ್ನು ಅರಸುವ ಬೇರೆಬೇರೆ ಹಾದಿಯನ್ನು ಕಂಡುಕೊಂಡು ತಮ್ಮಷ್ಟಕ್ಕೆ ಒಬ್ಬಂಟಿಯಾಗಿ ಇದ್ದುಬಿಡುತ್ತಾರೆ.

ಏನೇನೋ ಕಾರಣಕ್ಕೆ ಹೆಣ್ಣಿನಿಂದ ದೂರವಾಗಿ ಒಂಟಿಯಾದ ಗಂಡಸಿನ ಬದುಕಿನ ವಿವಿಧ ಮಜಲುಗಳನ್ನು ಮುರಕಾಮಿ ಕತೆಗಳಲ್ಲಿ ಓದುವಾಗ ಪರಿಣತಿಗೆ ತನ್ನ ಗಂಡ, ವಿಕ್ರಮನೇ ಕಣ್ಣ ಮುಂದೆ ಬಂದಿದ್ದುಂಟು. (ಇವತ್ತಿಗೂ ಅವನು ಒಬ್ಬಂಟಿಯಾಗಿಯೇ ಇದ್ದಾನಂತೆ!) ಇವೆಲ್ಲಾ ನೆಪ ಮಾತ್ರ! ಒಂದು ಮಾತು ಮಾತ್ರ ಸತ್ಯ – ಗಂಡು ಹೆಣ್ಣುಗಳ ಆಕರ್ಷಣೆಗೆ, ಬಿಟ್ಟಿರಲಾರದಷ್ಟು ನಂಟು ಬೆಳೆಯುವುದಕ್ಕೆ ಕಾರಣವನ್ನು ಇದುವರೆಗೆ ಯಾರು ತಾನೆ ಕೊಟ್ಟಿದ್ದಾರೆ? ಪುರಾಣ ಕಥೆಗಳಲ್ಲಿ ಕಾಮನು ಎಲ್ಲೋ ಅಡಗಿಕೊಂಡು ಒಂಟಿ ಗಂಡು –ಹೆಣ್ಣುಗಳನ್ನು ಹುಡುಕಿ ಹೊಂಚಿ ಅವರ ಮೇಲೆ ಹೂಬಾಣ ಬಿಡುತ್ತಾನಲ್ಲವೇ? ಅದು ಮಾತ್ರ ಇವತ್ತಿಗೂ ಸತ್ಯವೇ ಇದ್ದೀತು! ಅವನ ಬಾಣವು ಎಲ್ಲಿಂದಲೋ ಹೇಗೋ ಬಂದು ಅವರವರ ಮೆದು ಭಾಗವನ್ನೇ ಹುಡುಕಿ, ಒಳ ಹೊಕ್ಕು ಇಡೀ ದೇಹವನ್ನು ಆವರಿಸಿಬಿಡುತ್ತದೆ. ಅದಿಲ್ಲವಾದರೆ, ಇವರಿಬ್ಬರು ತಾವು ಇಷ್ಟಪಡದ ನಾಯಕ ನಾಯಕಿಯರ ಮುಖವನ್ನು ತಮ್ಮ ಇಷ್ಟದ ಮುಖಗಳಾಗಿ ಅದಲು ಬದಲು ಮಾಡಿಕೊಳ್ಳುತ್ತಿದ್ದರೆ? ಎಂದಿನದೋ ಕಥೆಯು ಇಂದಿನದು ಆಗುವುದು ಹೇಗೆ? ಯಾರದೋ ಕತೆ ನಮ್ಮದೇ ಕತೆ ಆಗುವುದು ಹೇಗೆ? ಪರಿಣತಿ ಅನೇಕ ಬಾರಿ ತನ್ನನ್ನು ತಾನೆ ವಿಮರ್ಶೆಗೆ ಒಡ್ಡಿಕೊಂಡಿದ್ದಾಳೆ:

ತನಗೆ ನಿಜಕ್ಕೂ ಆಗುತ್ತಿರುವುದು ಏನು? ಯಾವ ಸೆಳೆತಕ್ಕೆ ಸಿಕ್ಕಿದ್ದೇನೆ ತಾನು? (ಅಹಲ್ಯೆಯ ಕಾಮವೋ, ತಾರೆಯ ಮೋಹವೋ, ಅಮೃತಮತಿಯ ವ್ಯಾಮೋಹವೋ... ಏನಿದು?) ಈ ಐದಾರು ವರ್ಷಗಳಲ್ಲಿ ತನಗೆ ಎಂತೆಂಥವರೋ ಹತ್ತಿರವಾಗಿದ್ದರಲ್ಲವೇ? ಅವರೆಲ್ಲರಿಗಿಂತ ಇವನೇಕೆ ಹೀಗೆ ಬಿಟ್ಟು ಬಿಡದೆ ಕಾಡುತ್ತಿದ್ದಾನೆ? ಲೋಕದ ಕಣ್ಣಿಗೆ ಇವನದು ರೂಪವೇ ಅಲ್ಲ, ಕುರೂಪವೇ! ಇನ್ನು ಗುಣ ಸ್ವಭಾವದಲ್ಲೂ ವಿಲಕ್ಷಣವೇ ಸರಿ. ಹೆಮಿಂಗ್ವೇ ಮತ್ತು ಮುರಕಾಮಿ ಕಥಾ ನಾಯಕರ ಹಾಗೆ ಒಂಟಿಬಡುಕ! (ಸ್ತ್ರೀಲೋಲನೂ ಇರಬಹುದು). ಯಾರೊಂದಿಗೂ ಸರಿಯಾಗಿ ಮಾತನಾಡದ ಇವನು ತನ್ನ ಜೊತೆ ಎಷ್ಟು ಮಾತನಾಡುತ್ತಾನೆ! ತಾನೂ ಅಷ್ಟೇ. ಮೋಹದ ಮಾಯೆಗೆ ಒಳಗಾಗಿಬಿಟ್ಟಿದ್ದೇನೆಯೇ? ಅಂತಹ ವಯಸ್ಸೇ ತನ್ನದು? ಯಾರಲ್ಲೂ ಕಾಣದ ಏನನ್ನು ಇವನಲ್ಲಿ ಕಂಡಿದ್ದೇನೆ? ಕೊನೆಗೆ ಅವಳಿಗೆ ಒಂದು ಉತ್ತರ ಸಿಕ್ಕಿಬಿಟ್ಟಿತು! ಹೌದು. ಅದೇ! ಅವಳ ನೆಚ್ಚಿನ ಕವಿ, ಎಮಿಲಿ ಹೇಳುವಂತೆ, 'ದಿ ಸೋಲ್ ಸಿಲೆಕ್ಟ್ಸ್ ಹರ್ ಓನ್ ಸೊಸಾಯಿಟಿ ದೆನ್ ಶಟ್ಸ್ ದಿ ಡೋರ್'